सत्यमेव जयते

# INDIA NON JUDICIAL

## Government of Karnataka

### e-Stamp

| | | |
|---|---|---|
| Certificate No. | : | IN-KA17235684865106R |
| Certificate Issued Date | : | 15-Oct-2019 02:23 PM |
| Account Reference | : | NONACC (FI)/ kaksfcl08/ KAMALAPUR2/ KA-BY |
| Unique Doc. Reference | : | SUBIN-KAKAKSFCL08544628410093325R |
| Purchased by | : | THE REGISTRAR KANNADA UNIVERSITY HAMPI |
| Description of Document | : | Article 12 Bond |
| Description | : | AGREEMENT |
| Consideration Price (Rs.) | : | 0<br>(Zero) |
| First Party | : | THE REGISTRAR KANNADA UNIVERSITY HAMPI |
| Second Party | : | THE REGISTRAR AZIM PREMGI UNIVERSITY |
| Stamp Duty Paid By | : | THE REGISTRAR KANNADA UNIVERSITY HAMPI |
| Stamp Duty Amount(Rs.) | : | 100<br>(One Hundred only) |

Please write or type below this line

ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಬೆಂಗಳೂರು
ಇವರ ನಡುವೆ ಮಾಡಿಕೊಂಡಿರುವ

## ಒಪ್ಪಂದ ಪತ್ರ

*ಈ ಒಪ್ಪಂದ ಪತ್ರವನ್ನು, ದಿನಾಂಕ: 29.01.2019 ರಂದು ನಡೆದ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕಾರ್ಯಕಾರಿ ಸಮಿತಿಯ 199ನೇ ಸಭೆಯ ಅನುಮೋದನೆಯ ಅನುಸಾರವಾಗಿ ಮಾಡಿಕೊಳ್ಳಲಾಗಿದೆ.*

ಸನ್ ಎರಡು ಸಾವಿರದ ಹತ್ತೊಂಭತ್ತನೇ ಇಸವಿ ಅಕ್ಟೋಬರ್ ತಿಂಗಳಿನ ದಿನಾಂಕ ಹದಿನೈದರಂದು (15/10/2019) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ವಿದ್ಯಾರಣ್ಯದಲ್ಲಿ, ಕೆಳಗಿನ ಎರಡು ಪಕ್ಷಕಾರರುಗಳು ತಮ್ಮ ನಡುವೆ ಮಾಡಿಕೊಂಡಿರುವ ಒಪ್ಪಂದದ ಕ್ರಮವೇನೆಂದರೆ,

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

Registrar
Azim Premji University
Hosur Road, Electronics City
Bangalore - 560 100

Statutory Alert:
1. The authenticity of this Stamp Certificate should be verified at "www.shcilestamp.com" ... [illegible]
2. The onus of checking the legitimacy is on the users of the certificate.
3. In case of any discrepancy please inform the Competent Authority.

ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ ಅಧಿನಿಯಮ, 2010ರ (2010ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ಸ್ಥಾಪಿತವಾಗಿರುವ ಖಾಸಗಿ ವಿಶ್ವವಿದ್ಯಾಲಯವಾಗಿದ್ದು, ಪಿಕ್ಸೆಲ್ ಪಾರ್ಕ್, ಬಿ ಬ್ಲಾಕ್, ಪಿ.ಇ.ಎಸ್. ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕ್ಯಾಂಪಸ್, ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ (ನೈಸ್ ರಸ್ತೆ ಹಿಂಭಾಗ), ಬೆಂಗಳೂರು–560 100 ಎಂಬ ವಿಳಾಸದಲ್ಲಿ ತನ್ನ ಕಾರ್ಯಾಚರಣೆಯ ಮುಖ್ಯ ಸ್ಥಳವನ್ನು ಹೊಂದಿದ್ದು ಮತ್ತು #134, ದೊಡ್ಡಕನ್ನೆಲ್ಲಿ, ವಿಪ್ರೋ ಕಾರ್ಪೋರೇಟ್ ಕಚೇರಿಯ ಪಕ್ಕ, ಸರ್ಜಾಪುರ ರಸ್ತೆ, ಬೆಂಗಳೂರು - 560 035 ನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಅಜೀಂ ಪ್ರೇಂಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್‌ನ ಒಂದು ಭಾಗವಾದ **ಅಜೀಂ ಪ್ರೇಂಜಿ ವಿಶ್ವವಿದ್ಯಾಲಯವು** (ಇಲ್ಲಿ ಇನ್ನು ಮುಂದೆ **"ವಿಶ್ವವಿದ್ಯಾಲಯ"** ಎಂದು ಕರೆಯಲಾಗಿದೆ. ಈ ಅಭಿವ್ಯಕ್ತಿಯು ಸಂದರ್ಭ ಮತ್ತು ಅರ್ಥದಲ್ಲಿ ಅದಕ್ಕೆ ವಿರುದ್ಧಾರ್ಥ ಬಂದ ಹೊರತು, ಅದರ ಉತ್ತರಾಧಿಕಾರಿಗಳು ಮತ್ತು ಹಸ್ತಾಂತರ ಪಡೆದವರೆಂಬ ಅರ್ಥವನ್ನು ಹೊಂದಿರುತ್ತದೆ ಮತ್ತು ಅವರನ್ನು ಒಳಗೊಳ್ಳುತ್ತದೆ ಎಂದು ಪರಿಗಣಿಸತಕ್ಕದ್ದು) **ಒಬ್ಬ ಪಕ್ಷಕಾರರಾಗಿ,**

**ಮತ್ತು**

**ಕನ್ನಡ ವಿಶ್ವವಿದ್ಯಾಲಯ, ಹಂಪಿ,** ವಿದ್ಯಾರಣ್ಯ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ – 583 276 – ಈ ವಿಳಾಸದಲ್ಲಿ ತನ್ನ ಕಾರ್ಯಾಚರಣೆಗಳ ಮುಖ್ಯ ಸ್ಥಳವನ್ನು ಹೊಂದಿರುವ, (ಇಲ್ಲಿ ಇನ್ನು ಮುಂದೆ **'ಕನ್ನಡ ವಿಶ್ವವಿದ್ಯಾಲಯ'** ಎಂದು ಕರೆಯಲಾಗಿದೆ – ಈ ಅಭಿವ್ಯಕ್ತಿಯು ಸಂದರ್ಭ ಮತ್ತು ಅರ್ಥದಲ್ಲಿ ಅದಕ್ಕೆ ವಿರುದ್ಧಾರ್ಥ ಬಂದ ಹೊರತು, ಅದರ ಉತ್ತರಾಧಿಕಾರಿಗಳು ಮತ್ತು ಹಸ್ತಾಂತರ ಪಡೆದವರು ಎಂಬ ಅರ್ಥವನ್ನು ಹೊಂದಿರುತ್ತದೆ ಮತ್ತು ಅವರನ್ನು ಒಳಗೊಳ್ಳುತ್ತದೆ) **ಇನ್ನೊಬ್ಬ ಪಕ್ಷಕಾರರಾಗಿ.**

**ಕನ್ನಡ ವಿಶ್ವವಿದ್ಯಾಲಯ** ಮತ್ತು **ವಿಶ್ವವಿದ್ಯಾಲಯವು** ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣತಜ್ಞರು ಮತ್ತು ಇತರ ಹಿತಾಸಕ್ತಿದಾರರಿಗೆ ಸುಲಭವಾಗಿ ಲಭ್ಯವಾಗುವಂತೆ, ಖ್ಯಾತ ಕೃತಿಗಳು ಮತ್ತು ನಿಯತಕಾಲಿಕಗಳಿಂದ ಕನ್ನಡದಲ್ಲಿ ಗುಣಮಟ್ಟದ ಮೂಲ ವಾಚನ ಕೃತಿಗಳ ಸಂಕಲನವನ್ನು ತಯಾರಿಸುವ/ಅನುವಾದಿಸುವ, ತಮ್ಮ ಸಾಮಾನ್ಯ ಗುರಿಗಳ ಅನ್ವೇಷಣೆಯಲ್ಲಿ ಒಟ್ಟಾಗಿ ಕೆಲಸ ಮಾಡಲು ಒಪ್ಪಿಕೊಂಡಿವೆ.

**ವಿಶ್ವವಿದ್ಯಾಲಯ** ಮತ್ತು **ಕನ್ನಡ ವಿಶ್ವವಿದ್ಯಾಲಯಗಳನ್ನು** ಪ್ರತ್ಯೇಕವಾಗಿ "ಪಕ್ಷಕಾರರು" ಎಂದು ಮತ್ತು ಜಂಟಿಯಾಗಿ "ಪಕ್ಷಕಾರರುಗಳು" ಎಂದು ಕರೆಯಲಾಗಿದೆ.

ಈಗ ಈ ಒಪ್ಪಂದ ಪತ್ರವು ಇದರ ಪಕ್ಷಕಾರರಿಂದ ಮತ್ತು ಅವರ ನಡುವೆ ಈ ಮುಂದಿನಂತೆ ಒಪ್ಪಂದವನ್ನು ದಾಖಲಿಸುತ್ತದೆ:

**1.0. ವ್ಯಾಪ್ತಿ:**

**1.1 ವಾಚನ ಸಾಮಗ್ರಿ (ವಾಚಿಕೆಗಳು):**

ವಿವಿಧ ಲೇಖನಗಳು ಮತ್ತು ಓದು ಸಾಮಗ್ರಿಗಳನ್ನು ಸಂಚಯಿಸಿ ಮೂಲ ವಾಚನ ಸಾಮಗ್ರಿಗಳನ್ನು ಅಂದರೆ, "ವಾಚಿಕೆಗಳನ್ನು" (ವಾಚಿಕೆ/ರೀಡರ್ ಎಂದರೆ ಒಂದು ವಿಷಯದ ವಿದ್ಯಾರ್ಥಿಗೆ ಆ ನಿರ್ದಿಷ್ಟ ವಿಷಯದ ಬಗ್ಗೆ ಸಂಪೂರ್ಣ ಜ್ಞಾನವನ್ನು ನೀಡಲು ವಿನ್ಯಾಸಗೊಳಿಸಿದ ವಿವಿಧ ಪತ್ರಗಳು/ಅವುಗಳ ಆಯ್ದ ಭಾಗಗಳನ್ನು ಒಳಗೊಂಡಿರುವ ಒಂದು ಪುಸ್ತಕ) ಸಿದ್ಧಪಡಿಸುವ ಹಾಗೂ ಪ್ರಕಟಿಸುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯಗಳು ತಮ್ಮ ನಡುವೆ ಮಾಡಿಕೊಂಡಿರುವ ಸಹಯೋಗಕ್ಕೆ ಈ ಒಪ್ಪಂದವು ಆಧಾರವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಸಮಾಜ ವಿಜ್ಞಾನ, ಅಭಿವೃದ್ಧಿ ಮತ್ತು ಒಟ್ಟಾರೆ ಕನ್ನಡ ಭಾಷೆಯ ಪ್ರವರ್ಧನೆಯ ಬಗ್ಗೆ ಆಸಕ್ತಿಯನ್ನು ಹೊಂದಿರುತ್ತದೆ. ವಿಶ್ವವಿದ್ಯಾಲಯವು ಪದವಿ, ಸ್ನಾತಕೋತ್ತರ ಮತ್ತು ಸಂಶೋಧನಾ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗಾಗಿ ಶಿಕ್ಷಣ ಮತ್ತು ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಕನ್ನಡದಲ್ಲಿ ಸಿದ್ಧಪಡಿಸಲು ಮತ್ತು ಅವು ವಿದ್ಯಾರ್ಥಿಗಳಿಗೆ ದೊರಕುವಂತೆ ಮಾಡಲು ಹಾಗೂ ವಾಚಿಕೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಲು ಉತ್ಸುಕವಾಗಿದೆ.

ಹೀಗೆ ಸಿದ್ಧಪಡಿಸಿದ ವಾಚಿಕೆಗಳನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಕಟಣಾಲಯವಾದ "ಪ್ರಸಾರಾಂಗ"ವು ಇಬ್ಬರೂ ಪಕ್ಷಕಾರರು ಪರಸ್ಪರ ಒಪ್ಪಿಕೊಂಡ ನಿಯಮಗಳಿಗೆ ಅನುಗುಣವಾಗಿ ಪ್ರಕಟಿಸುತ್ತದೆ.

**1.2 ಇತರ ಸಾಮಾನ್ಯ ಹಿತಾಸಕ್ತಿಗಳು:**

ಸಾಮಾನ್ಯ ಹಿತಾಸಕ್ತಿಗಳು ಪಕ್ಷಕಾರರುಗಳ ನಡುವಿನ ಸಹಕಾರಕ್ಕೆ ಸಾಮಾನ್ಯ ನೆಲೆಗಳನ್ನು ಒದಗಿಸುತ್ತವೆ, ಅವು ಕೆಳಕಂಡಂತಿವೆ:

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583 276

Manoj.P
Registrar
Azim Premji University
Hosur Road, Electronics City
Bangalore - 560 100

1.2.1. ಶಿಕ್ಷಣ, ಸಮಾಜವಿಜ್ಞಾನ, ಅಭಿವೃದ್ಧಿ ಮತ್ತು ಭಾಷಾ ಬೋಧನ ವಿಧಾನಕ್ಕಾಗಿ ಸಂಪನ್ಮೂಲ ತಯಾರಿಕೆಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಬೋಧಕವರ್ಗ ಮತ್ತು ವಿದ್ಯಾರ್ಥಿಗಳೂ ಸೇರಿದಂತೆ ತಮ್ಮ ಸದಸ್ಯರ ನಡುವೆ ಸಹಯೋಗ.

1.2.2. ಪಕ್ಷಕಾರರುಗಳು ಕಾಲದಿಂದ ಕಾಲಕ್ಕೆ ಕೈಗೊಳ್ಳುವ ಸಹಯೋಗದ ಯೋಜನೆಗಳನ್ನು ಸುಲಭಗೊಳಿಸಲು ಅನುಕೂಲವಾಗುವಂತೆ ತಮ್ಮಲ್ಲಿ ಪ್ರತಿಯೊಬ್ಬರಲ್ಲೂ ಏನೇನು ಸೌಲಭ್ಯಗಳು ಲಭ್ಯವಿವೆಯೋ ಅವನ್ನು ಆದಷ್ಟು ಒದಗಿಸುತ್ತವೆ. ಪಕ್ಷಕಾರರುಗಳು ಅಂತಹ ಸಹಯೋಗದ ಯೋಜನೆಗಳಿಗೆ ತಗಲುವ ತಮ್ಮ ತಮ್ಮ ವೆಚ್ಚವನ್ನು ತಾವೇ ಭರಿಸತಕ್ಕದ್ದು.

1.2.3. ಸಹಯೋಗ ಯೋಜನೆಗಳಲ್ಲಿ ಭಾಗವಹಿಸುವ ಮತ್ತು ಸಂಸ್ಥೆಗಳ ಸಾಮಾನ್ಯ ಗುರಿಗಳಿಗೆ ಕೆಲಸ ಮಾಡುವ ವ್ಯಕ್ತಿಗಳು ತಮ್ಮ ತಮ್ಮ ಸಂಸ್ಥೆಗಳಿಂದ ವೈಯಕ್ತಿಕ ಆಧಾರದ ಮೇಲೆ ತಮ್ಮ ಕೆಲಸಕ್ಕೆ ಸಂಭಾವನೆ ಪಡೆಯಬಹುದು.

1.2.4. ಸಮಯ ಸಂದರ್ಭಗಳು ಬಂದಾಗಲೆಲ್ಲ ಈ ಯೋಜನೆಗಳ ಕಾರ್ಯವಿಧಾನಗಳು ಮತ್ತು ಅವುಗಳ ನಿರ್ದಿಷ್ಟ ಸ್ವರೂಪ ಮತ್ತು ವಿವರಗಳನ್ನು ಚರ್ಚಿಸಲಾಗುವುದು ಮತ್ತು ಅದರ ಕಾರ್ಯನಿರ್ವಹಣೆ ಬಗ್ಗೆ ನಿರ್ದಿಷ್ಟವಾದ ಒಪ್ಪಂದಗಳನ್ನು ಮಾಡಿಕೊಳ್ಳುತ್ತವೆ.

**2.0 ಒಪ್ಪಂದದ ಅವಧಿ:**

2.1. ಈ ಒಪ್ಪಂದವು 15.10.2019 ರಿಂದ ಪ್ರಾರಂಭವಾಗುತ್ತದೆ ಮತ್ತು ಎರಡೂ ಪಕ್ಷಕಾರರ ಸಮ್ಮತಿಯಿರುವವರೆಗೆ ಜಾರಿಯಲ್ಲಿರುತ್ತದೆ.

2.2. ಇಬ್ಬರಲ್ಲೊಬ್ಬ ಪಕ್ಷಕಾರರು ಒಪ್ಪಂದವು ಜಾರಿಯಲ್ಲಿರುವ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಇನ್ನೊಬ್ಬ ಪಕ್ಷಕಾರರಿಗೆ 30 ದಿನಗಳ ಲಿಖಿತ ನೋಟೀಸು ನೀಡಿ ಈ ಒಪ್ಪಂದವನ್ನು ಅಂತ್ಯಗೊಳಿಸಬಹುದು.

**3.0 ಗೌಪ್ಯ ಮಾಹಿತಿ:**

3.1 ಇಬ್ಬರು ಪಕ್ಷಕಾರರಲ್ಲಿ ಯಾರೊಬ್ಬರೂ ಈ ಒಪ್ಪಂದದ ಚಾಲ್ತಿ ಅವಧಿಯಲ್ಲಿ ಮತ್ತು ಈ ಒಪ್ಪಂದದ ಮುಕ್ತಾಯದ/ಅದನ್ನು ಅಂತ್ಯಗೊಳಿಸಿದ ದಿನಾಂಕದಿಂದ 5 ವರ್ಷಗಳವರೆಗೆ ತಾವು ಇನ್ನೊಬ್ಬ ಪಕ್ಷಕಾರರಿಂದ ಪಡೆದುಕೊಂಡ, ಸ್ವೀಕರಿಸಿದ ಎಲ್ಲ ಗೌಪ್ಯ ಮಾಹಿತಿಯನ್ನು ಆ ಇನ್ನೊಬ್ಬ ಪಕ್ಷಕಾರರಿಂದ ಯಾವುದೇ ಲಿಖಿತ ಪೂರ್ವಾನುಮತಿಯಿಲ್ಲದೆ ಯಾರೇ ಮೂರನೇ ಪಕ್ಷಕಾರರಿಗೆ ಬಹಿರಂಗಪಡಿಸತಕ್ಕದ್ದಲ್ಲ. ಅಲ್ಲದೆ ಇಬ್ಬರು ಪಕ್ಷಕಾರರಲ್ಲಿ ಯಾರೊಬ್ಬರ ಲಿಖಿತ ಪೂರ್ವಾನುಮತಿ ಪಡೆದುಕೊಂಡ ಹೊರತು ಇನ್ನೊಬ್ಬ ಪಕ್ಷಕಾರರು ಮೇಲೆ ಹೇಳಿದ ಮಾಹಿತಿಯನ್ನು ಈ ಒಪ್ಪಂದದ ಅಡಿಯಲ್ಲಿ ಪರಿಗಣಿಸಿರುವ ಉದ್ದೇಶಕ್ಕಿಂತ ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ. "ರಹಸ್ಯ ಮಾಹಿತಿ" ಎಂದರೆ ಇಬ್ಬರು ಪಕ್ಷಕಾರರಲ್ಲಿ ಯಾರೊಬ್ಬರೂ ಬರವಣಿಗೆಯಲ್ಲಿ ರಹಸ್ಯ ಮಾಹಿತಿಯೆಂದು ಗುರುತು ಮಾಡಿರುವ ಅಥವಾ ಹಾಗೆಂದು ಹೆಸರಿಸಿರುವ ಎಲ್ಲಾ ಮಾಹಿತಿಗಳು.

**4.0 ಬೌದ್ಧಿಕ ಆಸ್ತಿಯ ಹಕ್ಕುಗಳು:**

4.1. ಈ ಒಪ್ಪಂದದ ಅಡಿಯಲ್ಲಿ ಉತ್ಪತ್ತಿಯಾಗುವ ಯಾವುದೇ ಮಾಹಿತಿ ಮತ್ತು ಜ್ಞಾನ ಉತ್ಪನ್ನಗಳ ಹಕ್ಕುಗಳನ್ನು ಇಬ್ಬರೂ ಪಕ್ಷಕಾರರುಗಳು ಸಹ-ಮಾಲೀಕತ್ವದಲ್ಲಿ ಹೊಂದಿರತಕ್ಕದ್ದು ಮತ್ತು ಸದರಿ ಜ್ಞಾನ ವಿಷಯದ ಬಳಕೆ, ನಕಲು ಮತ್ತು ಅದರ ಆಧಾರದ ಮೇಲೆ ವಿಷಯಾಭಿವೃದ್ಧಿ ಮಾಡುವಾಗ ಸೂಕ್ತ ಆಭಾರ ಮನ್ನಣೆ ಸಲ್ಲಿಸುವಂತೆ ನೋಡಿಕೊಳ್ಳತಕ್ಕದ್ದು. ಪಕ್ಷಕಾರರುಗಳು ಈ ಒಪ್ಪಂದದ ಅಡಿಯಲ್ಲಿನ ಕೆಲಸದ ಅವಧಿಯಲ್ಲಿ ಬಳಸಿದ ಯಾವುದೇ ಸಂಶೋಧನಾ ವಿಧಾನ ಅಥವಾ ಮೂರನೇ ವ್ಯಕ್ತಿಯ ಬೌದ್ಧಿಕ ಆಸ್ತಿ (ಐಪಿ) ಯನ್ನು ಆ ಪಕ್ಷಕಾರರು ಹಾಗೆ ಬಳಸುವುದಕ್ಕೆ ಪರವಾನಗಿ ಪಡೆದುಕೊಂಡಿರತಕ್ಕದ್ದು ಎಂದು ಒಪ್ಪಿಕೊಂಡಿರುತ್ತಾರೆ. ಪ್ರತಿಯೊಬ್ಬ ಪಕ್ಷಕಾರರು ಯಾವುದೇ ಮೂರನೇ ವ್ಯಕ್ತಿಗೆ ಸೇರಿದ ಮತ್ತು ತಾನು ಬಳಸಿದ ಯಾವುದೇ ಬೌದ್ಧಿಕ ಆಸ್ತಿ (ಐಪಿ) ಯ ಸಂಬಂಧದಲ್ಲಿ ಮಾಡಿರುವ ಉಲ್ಲಂಘನೆಯ ವಿಷಯದಲ್ಲಿ ಇನ್ನೊಬ್ಬ ಪಕ್ಷಕಾರರು ನಷ್ಟ ಅನುಭವಿಸದಂತೆ ತಡೆಯತಕ್ಕದ್ದು ಮತ್ತು ನಷ್ಟದಿಂದ ಪಾರಾಗಿರುವಂತೆ ನೋಡಿಕೊಳ್ಳತಕ್ಕದ್ದು ಎಂದು ಒಪ್ಪಿಕೊಂಡಿರುತ್ತಾರೆ. ಪ್ರತಿಯೊಂದು ಪಾಠಿಕೆಯ ಎಲ್ಲಾ ಪ್ರತಿಗಳು, ಮರುಮುದ್ರಣಗಳು ಪರಸ್ಪರ ಒಪ್ಪಿಕೊಂಡ ಕೃತಿಸ್ವಾಮ್ಯ ಅಧಿಸೂಚನೆಯನ್ನು ಹೊಂದಿರುತ್ತವೆ.

Manoj P
Registrar
Azim Premji University
Hosur Road, Electronics City
Bangalore - 560 100

4.2 ಈ ಒಪ್ಪಂದ ಪತ್ರವು ಕನ್ನಡ ವಿಶ್ವವಿದ್ಯಾಲಯಕ್ಕೆ ವಿಶ್ವವಿದ್ಯಾಲಯವು ಅನುಮೋದಿಸಿದಂತೆ ಹೊರತು ಬೇರೆ ಯಾವುದೇ ರೂಪದಲ್ಲಿ ಅಥವಾ ರೀತಿಯಲ್ಲಿ ವಾಚಿಕೆಯನ್ನು ಪ್ರಕಟಿಸಲು ಯಾವುದೇ ಹಕ್ಕು ಅಥವಾ ಪರವಾನಗಿಯನ್ನು ನೀಡುವುದಿಲ್ಲ.

**5.0 ನೋಟೀಸು:**

5.1 ಇಬ್ಬರು ಪಕ್ಷಕಾರರಲ್ಲಿ ಯಾರೊಬ್ಬರೂ ಇನ್ನೊಬ್ಬ ಪಕ್ಷಕಾರರಿಗೆ ನೀಡಬೇಕಾದ ಈ ಒಪ್ಪಂದದ ಮೂಲಕ ಅಗತ್ಯವಾದ ಅಥವಾ ಪ್ರಾಧಿಕೃತವಾದ ಯಾವುದೇ ನೋಟೀಸು ಅಥವಾ ಇತರ ಮಾಹಿತಿಗಳನ್ನು ಖುದ್ದು ತಲುಪಿಸುವ ಮೂಲಕ ಅಥವಾ ತಲುಪೋಚ್ಚಿಗೆ ನೋಂದಾಯಿತ ಅಂಚೆ ಮೂಲಕ ಅಥವಾ ಕೊರಿಯರ್ ಮೂಲಕ ಅಥವಾ ಫ್ಯಾಕ್ಸ್ (ಫ್ಯಾಸಿಮಿಲಿ ಟ್ರಾನ್ಸ್‌ಮಿಷನ್) ಮೂಲಕ ಅಥವಾ ಇದೇ ಬಗೆಯ ಸಂವಹನ ಮಾಧ್ಯಮದ ಮೂಲಕ ಇತರ ಪಕ್ಷಕಾರರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸುವುದು:

**ಇವರಿಗೆ: ಕಾರ್ಯಕ್ರಮ ವ್ಯವಸ್ಥಾಪಕರು(ಅನುವಾದ ಉಪಕ್ರಮ), ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ,** ಪಿಕ್ಸೆಲ್ ಪಾರ್ಕ್ ಬಿ ಬ್ಲಾಕ್, ಪಿಇಎಸ್ ಇಂಜಿನಿಯರಿಂಗ್ ಇನ್‌ಸ್ಟಿಟ್ಯೂಟ್ ಕ್ಯಾಂಪಸ್, ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ (ನೈಸ್ ರಸ್ತೆ ಹಿಂದೆ), ಬೆಂಗಳೂರು – 560 100

ಹಾಗೂ ಪ್ರತಿಯನ್ನು

**ಅಜೀಂ ಪ್ರೇಂಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್**, #134, ದೊಡ್ಡಕನ್ನೆಲ್ಲಿ, ವಿಪ್ರೋ ಕಾರ್ಪೋರೇಟ್ ಕಚೇರಿ ಪಕ್ಕ, ಸರ್ಜಾಪುರ ರಸ್ತೆ, ಬೆಂಗಳೂರು– 560 035

ಮತ್ತು

ಕುಲಸಚಿವರು, **ಕನ್ನಡ ವಿಶ್ವವಿದ್ಯಾಲಯ, ಹಂಪಿ**, ವಿದ್ಯಾರಣ್ಯ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ – 583 276

**6.0 ಅನ್ವಯಿಸುವ ಕಾನೂನು:**

ಈ ಒಪ್ಪಂದಕ್ಕೆ ಭಾರತದ ಕಾನೂನುಗಳು ಅನ್ವಯಿಸುತ್ತವೆ ಮತ್ತು ಇದರ ಪ್ರತಿಯೊಬ್ಬ ಪಕ್ಷಕಾರರು ಅನ್ವಯಿಸುವ ಪ್ರಕಾರ ಹೊಸಪೇಟೆ/ ಬಳ್ಳಾರಿ/ ಕರ್ನಾಟಕ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ತಮ್ಮನ್ನು ಒಪ್ಪಿಸಿಕೊಳ್ಳುತ್ತಾರೆ.

**ಇದಕ್ಕೆ ಸಾಕ್ಷಿಯಾಗಿ ಇಬ್ಬರು ಪಕ್ಷಕಾರರುಗಳು ಮೇಲೆ ಮೊದಲು ಬರೆಯಲಾಗಿರುವ ದಿನಾಂಕ ತಿಂಗಳು ಮತ್ತು ವರ್ಷದಂದು**

ಈ ದಾಖಲೆಗೆ ಕ್ರಮಬದ್ಧವಾಗಿ ಸಹಿ ಹಾಕಿರುತ್ತಾರೆ.

| ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಬೆಂಗಳೂರು | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| --- | --- |
| ಪರವಾಗಿ [signature] | ಪರವಾಗಿ [signature] |
| ಹೆಸರು: ಮನೋಜ್ ಪಿ | ಹೆಸರು: ಡಾ. ಎ. ಸುಬ್ಬಣ್ಣ ರೈ |
| ಪದನಾಮ: ಕುಲಸಚಿವರು/ರಿಜಿಸ್ಟ್ರಾರ್ | ಪದನಾಮ: ಕುಲಸಚಿವರು |
| ದಿನಾಂಕ | ದಿನಾಂಕ [signature] |

Manoj.P
Registrar
Azim Premji University
Hosur Road, Electronics City
Bangalore - 560 100

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276